**3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ, ಹುಬ್ಬಳ್ಳಿ**

**ಸಿ.ಸಿ.ನಂ. 1102/2025**

ಫಿರ್ಯಾದಿಃ ಸಿದ್ದನಗೌಡ ತಂದೆ ಗೌಡಪ್ಪಗೌಡ ಭರಮಗೌಡ್ರ.

**ವಿರುದ್ಧ**

ಆರೋಪಿಃ ಶ್ರೀಮತಿ ಲಕ್ಷ್ಮೀ ಗಂಗಾಧರ ನರಗುಂದ.

**ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 251 ರ ಅಡಿಯಲ್ಲಿ ಆರೋಪಣೆ -**

ಪಿರ್ಯಾದಿದಾರರು ಮತ್ತು ಆರೋಪಿಯಾದ ನೀವು ಒಬ್ಬರಿಗೊಬ್ಬರು ಪರಿಚಯಸ್ತರು ಇದ್ದು, ನೀವು ಪಿರ್ಯಾದಿದಾರರ ಕಡೆಯಿಂದ ರೂ. 1,40,000/- ಗಳ ಕೈಗಡ ಸಾಲವನ್ನು ಪಡೆದುಕೊಂಡಿದ್ದು, ಪಿರ್ಯಾದಿದಾರರು ತಮಗೆ ಬರಬೇಕಾದ ಹಣವನ್ನು ಸಂದಾಯ ಮಾಡುವಂತೆ ಕೇಳಿಕೊಂಡಾಗ ಆರೋಪಿಯಾದ ನೀವು ಸ್ಟೇಟ ಬ್ಯಾಂಕ ಆಫ್ ಇಂಡಿಯಾ, ನವನಗರ ಬ್ರಾಂಚಿನ ಚೆಕ್ಕ ನಂ. 808354 ರೂ. 1,40,000/- ದಿಃ 14.06.2024 ಎಂದು ನಮೂದಿಸಿ ಫಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ. ಸದರಿ ಚೆಕ್ಕನ್ನು ನಗದಿಕರಣಕ್ಕೆ ಫಿರ್ಯಾದಿದಾರರು ತಮ್ಮ ಬ್ಯಾಂಕ ರ್ನಾಟಕ ಬ್ಯಾಂಕ ನವನಗರ ಬ್ರಾಂಚಿಗೆ ಸಲ್ಲಿಸಿದಾಗ ಸದರಿ ಚೆಕ್ಕು ನಗದಿಕರಣವಾಗದೆ "**Funds insufficient**" ಎಂಬ ಶರಾದೊಂದಿಗೆ ದಿಃ 15.03.2024 ರಂದು ವಾಪಾಸು ಬಂದಿದ್ದು ನಂತರ ಪಿರ್ಯಾದಿದಾರರು ದಿಃ 16.07.2024 ರಂದು ನಿಮಗೆ ನೋಟಿಸು ನೀಡಿದ್ದು, ಸದರಿ ನೋಟಿಸನ್ನು ಆರೋಪಿಯಾದ ನೀವು ಸ್ವಿಕರಿಸಿದ್ದು ಅದಕ್ಕೆ ಇದುವರೆಗೂ ಯಾವುದೇ ಮರುಜವಾಬನ್ನೂ ನೀಡಿರುವುದಿಲ್ಲ ಹಾಗೂ ಸದರಿ ಚೆಕ್ಕಿನ ಮೊತ್ತವನ್ನು ಸಹ ಮರುಪಾವತಿಸಿರುವುದಿಲ್ಲ. ಆದ್ದರಿಂದ ನೀವು ಕಲಂ 138 ಎನ್.ಐ ಆಕ್ಟ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಅಪರಾದ ಎಸಗಿರುವುದಾಗಿ ಆರೋಪಿಸಲಾಗಿದೆ.

(ಈಗ ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಿ ಆರೋಪಿಯು ನೀಡಿದ ಉತ್ತರವನ್ನು ನನ್ನ ಸಮಕ್ಷಮದಲ್ಲಿ ದಾಖಲಿಸಿಕೊಳ್ಳಲಾಯಿತು)

ಸ್ಥಳಃ ಹುಬ್ಬಳ್ಳಿ

ದಿನಾಂಕಃ 13.11.2025

3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಹುಬ್ಬಳ್ಳಿ

3 ನೇ ಹೆಚ್ಚುವರಿ **ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ,** ಹುಬ್ಬಳ್ಳಿ

**ಸಿ.ಸಿ.ನಂ.1102/2025**

ಪಿರ್ಯಾದಿಃ ಶ್ರೀ ಕಣ್ಣಪ್ಪ ತಂದೆ ಫಕ್ಕೀರಪ್ಪ ಬನಾಕರ

**ವಿರುದ್ಧ**

ಆರೋಪಿಃ ಶ್ರೀ ಮಹದೇವಪ್ಪ ತಂದೆ ಮಾನಿಕರಾವ ಮಡಿವಾಳರ

**ಆಪಾದನೆ**

ಪ್ರಶ್ನೆ ನಂ. 1 ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ ?

ಉತ್ತರ ಃ

ಪ್ರಶ್ನೆ ನಂ. 2 ಃ ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ ಃ

(ಮೇಲಿನ ಆಪಾದನೆ ಆರೋಪಿತರಿಗೆ ಓದಿ ಹೇಳಿದ ನಂತರ ಅವರ ಹೇಳಿಕೆಯನ್ನು ಬರೆದುಕೊಂಡಿದ್ದು, ಸದರಿ ಹೇಳಿಕೆಯು ನಿಜ ಹಾಗೂ ಸರಿ ಇದೆ ಎಂದು ಧೃಡೀಕರಿಸಿದೆ ಎಂದು ಹೇಳಿದ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಂಡಿದ್ದು ಅದು ಸತ್ಯವಾಗಿರುತ್ತದೆ ಎಂದು ಧೃಡೀಕರಿಸುತ್ತೇನೆ.)

ದಿನಾಂಕಃ13.10.2025

3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,

ಹುಬ್ಬಳ್ಳಿ